ಪಡಿಯಚ್ಚಿನಂತಿದ್ದವನನ್ನು ಗುರ್ತಿಸಿದ್ದು ಎಲ್ಲಾ ಹೇಳಿಕೊಂಡಳು. ಜೊತೆ ಜೊತೆಗೆ ಈ ವೃತ್ತಾಂತದ ಗೋಪ್ಯತೆ ಕಾಪಾಡಬೇಕೆಂದು ಅವಳಿಂದ ಪ್ರಮಾಣವನ್ನೂ ಮಾಡಿಸಿಕೊಂಡಳು.

* * *

ಓಮ್ಮೆ ಕುಂತಿ ವೃದ್ಧೆಯನ್ನು ಕೇಳಿದಳು. 'ನಾನು ಜೀವನದಲ್ಲಿ ಅನುಭವಿಸಿದ ಕಷ್ಟನಷ್ಟಗಳನ್ನೆಲ್ಲಾ ನಿನ್ನೊಡನೆ ಹಂಚಿಕೊಂಡೆ. ನೀನು ಮಾತ್ರ ನಿನ್ನ ಗತಜೀವನದ ಬಗ್ಗೆ ಬಾಯೇ ಬಿಟ್ಟಿಲ್ಲ. ನಿನಗೆ ನೆನಪುಗಳೇ ಇಲ್ಲವೇ ಅಥವಾ ನಿನ್ನ ಭಾವನೆಗಳೆಲ್ಲಾ ಬತ್ತಿಹೋಗಿದೆಯೇ?'

ವೃದ್ಧೆ ನಕ್ಕಳು. ಕಣ್ಣಂಚಿನಲ್ಲಿ ನೀರಿಣಿಕಿತು. ಕುಂತಿ, ನಾನು ಜನ್ಮ ತಳೆದಾಗಿನಿಂದ ನನ್ನ ಬಗ್ಗೆ, ನನ್ನ ಭಾವನೆಗಳ ಬಗ್ಗೆ ಆಸಕ್ತಿ ತೋರಿದವರಲ್ಲಿ ನೀನೇ ಮೊದಲಿಗಳು. ರಾಜಕುಟುಂಬಗಳಲ್ಲಿ ದಾಸಿಯರು ಕೇವಲ ಸೇವೆಗೆ ಮೀಸಲು. ಒಮ್ಮೆ ಜೀತಕ್ಕೆ ಬಂದರೆ ಅವರ ಮಾನ ಪ್ರಾಣಗಳೆಲ್ಲಾ ಒಡತಿಗೆ ಮೀಸಲೆಂದು ನಿನಗೆ ತಿಳಿಯದೇ?ನೀನೂ ರಾಜ ವಂಶಕ್ಕೆ ಸೇರಿದವಳು. ನಿನಗೂ ದಾಸಿಯರಿದ್ದರಲ್ಲವೇ?'

ಅವಳ ಪ್ರಶ್ನೆ ಕುಂತಿಯನ್ನು ದಿಙ್ಮೂಢಳನ್ನಾಗಿಸಿತು. ಅವಳು ಈ ದೆಸೆಯಲ್ಲಿ ಈವರೆಗೆ ಚಿಂತಿಸಿರಲೇ ಇಲ್ಲ. ಕೇವಲ ತಮ್ಮ ಸೇವೆಗಾಗಿ ಭೋಗಕ್ಕಾಗಿ ಮೀಸಲಾದ ಯಂತ್ರಗಳೆಂಬ ಭಾವದೊಂದಿಗೆ ಬೆಳೆದಿದ್ದಳವಳು. ಈ ವೃದ್ಧೆಯ ನಿರಂತರ ಒಡನಾಟ, ಸಾಮಿಪ್ಯ ಅವಳ ಕಣ್ಣನ್ನು ತೆರೆಸಿತು. ಈ ದಾಸಿಯ ಆಗಿಹೋದ ಜೀವನದ ವಿವರಗಳನ್ನು ಕೇಳಲು ಉತ್ಸಾಹದಿಂದ ಕುಳಿತಳು.

* * *

ನನ್ನ ಊರಿನ ಬಗ್ಗೆ, ನನ್ನ ಮಾತಾಪಿತೃಗಳ ಬಗ್ಗೆ ನನಗೆ ನೆನಪೇ ಇಲ್ಲ. ಬುದ್ಧಿ ತಿಳಿದಾಗಿನಿಂದಲೂ ಅಂತಃಪುರದಲ್ಲಿ ದಾಸಿಯಾಗಿ ಸೇವೆ ಮಾಡುತ್ತಾ ಬಂದವಳು ನಾನು. ಅನಾಥಳೆಂದು ಹಿರಿಯ ದಾಸಿಯರು ಸ್ವಲ್ಪ ಸಹಾನುಭೂತಿ ತೋರುತ್ತಿದ್ದರಷ್ಟೇ. ಒಡತಿಯರ ಸೇವೆ ಮಾಡುತ್ತಲೇ ಹರೆಯ ಮುಟ್ಟಿದ್ದೆ. ಕನಸು ಕಾಣುತ್ತಾ ಮೈಮರೆಯುತ್ತಾ ಕುಳಿತು ಎಷ್ಟೋಬಾರಿ ಒಡತಿಯಿಂದ ಶಿಕ್ಷೆಗೆ ಒಳಗಾಗುತ್ತಿದ್ದೆ. ಒಡತಿಯರ ಶೃಂಗಾರಕ್ಕಾಗಿ ಹಾಕಿದ್ದ ನಿಲವುಗನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದೆ. ನೋಡಿದ ಬಳಿಕ ಸೌಂದರ್ಯ ಯಾರೊಬ್ಬರ ಸ್ವತ್ತೂ ಅಲ್ಲ ಎಂದು ಖುಷಿ ಪಟ್ಟುಕೊಳ್ಳುತ್ತಿದ್ದೆ.

ರಾಜಕುಟುಂಬದ ಸಂಕಟಕಾಲ ಅದಾಗಿತ್ತು. ರಾಜಮಾತೆ ಸತ್ಯವತಿಯ ಪುತ್ರರೀರ್ವರೂ ಸಂತಾನವಿಲ್ಲದೇ ಮರಣ ಹೊಂದಿದ್ದರು. ಕುರುವಂಶಕ್ಕೆ ಉತ್ತರಾಧಿಕಾರಿಗಳಿಲ್ಲದ ಚಿಂತೆ ರಾಜಮಾತೆಯನ್ನೂ ಭೀಷ್ಮರನ್ನೂ ಕಾಡಿತ್ತು. ಆಸ್ಥಾನ ಪಂಡಿತರು, ಶಾಸ್ತ್ರಜ್ಞರು ಸಮಾಲೋಚನೆ ನಡೆಸಿ ಪರಿಹಾರವಾಗಿ ವಿಧವೆಯಾದ ಸೊಸೆ ಯೋಗ್ಯ ಪುರುಷನೊಡನೆ ನಿಯೋಗ ವಿಧಿಯ ಮೂಲಕ ಸಂತಾನ ಪಡೆಯುವುದು ಶಾಸ್ತ್ರಸಮ್ಮತ ಎಂದು ಅಭಿಪ್ರಾಯಪಟ್ಟರು.

ತನ್ನ ತಪಸ್ಸಿನಿಂದ ಜ್ಞಾನದಿಂದ ಋಜು ಜೀವನದಿಂದ ಎಲ್ಲರಿಂದ ಮಾನ್ಯತೆ ಪಡೆದಿದ್ದ ತನ್ನ ಹಿರಿಯ ಪುತ್ರ ವ್ಯಾಸಮುನಿಯೇ ನಿಯೋಗಕ್ಕೆ ಸೂಕ್ತ ಎಂದು ನಿರ್ಧರಿಸಿದ ರಾಜಮಾತೆ ಅವರಿಗೆ ಕರೆ ಕಳುಹಿಸಿದಳು. ಆಕೆಯ ಅಣತಿಯಂತೆ ಮುನಿಯಿಂದ ನಿಯೋಗವಿಧಿ ನಡೆದು ಹಿರಿಯ ಸೊಸೆ ಅಂಬಿಕೆ ಧೃತರಾಷ್ಟ್ರನಿಗೆ ಜನ್ಮ ನೀಡಿದಳು. ದಿನ ಕಳೆದಂತೆ ಮಗು ದೃಷ್ಟಿಹೀನ ಎಂಬುದರಿವಾಗಿ ಎರಡನೆಯ ಸೊಸೆ ಅಂಬಾಲಿಕೆಯೊಡನೆ ಮತ್ತೊಮ್ಮೆ ನಿಯೋಗ ನಡೆದು ಪಾಂಡುವಿನ ಜನ್ಮವಾಯಿತು. ಕುರುವಂಶದ ದುರಾದೃಷ್ಟಕ್ಕೆ ಮಗು ಹುಟ್ಟಿನೊಂದಿಗೇ ಅನಾರೋಗ್ಯ ಬಳುವಳಿಯಾಗಿ ತಂದಿತ್ತು. ಬಲಾಢ್ಯನಾದ ಉತ್ತರಾಧಿಕಾರಿಗಾಗಿ ಹಂಬಲಿಸುತ್ತಿದ್ದ ರಾಜಮಾತೆಯ ಬಯಕೆ ಬಯಕೆಯಾಗಿಯೇ ಉಳಿದು ಬಿಟ್ಟಿತು.ಈ ಕಾಲಘಟ್ಟದಲ್ಲಿ ನಾನು ಮಗು ಧೃತರಾಷ್ಟ್ರನನ್ನು ಆಡಿಸಿ ಪಾಲಿಸುವ ಸೇವಕಿಯಾಗಿ ಅಂಬಿಕೆಯ ಅಂತಃಪುರ ಸೇರಿದೆ.

ಕಣ್ಣು ಕಾಣದ ಆ ಶಿಶು ಸದಾ ರಚ್ಚೆ ಹಿಡಿದು ಅಳುತ್ತಿತ್ತು. ಸಾಮಾನ್ಯ ಮಕ್ಕಳಂತೆ ಅದಕ್ಕೆ ಮರಗಿಡ, ಹೂವು ಹಣ್ಣು, ಪಕ್ಷಿ ಪಾತರಗಿತ್ತಿಗಳನ್ನು ತೋರಿಸಿ ರಮಿಸುವಂತಿರಲಿಲ್ಲ. ಕೇವಲ ಮಾತಿನಿಂದ ಹಾಡಿನಿಂದ ರಮಿಸಬೇಕಿತ್ತು. ಒಂದು ಮುಂಜಾನೆ ಮಗು ಇದ್ಯಾವುದಕ್ಕೂ ಜಗ್ಗದೆ ಅಳುತ್ತಲೇ ಇತ್ತು. ರಾಜಬೀದಿಗೆ ಕರೆ ತಂದು ಒಂದು ಬದಿಗೆ ನಿಂತೆ. ಜನರ ಮಾತುಕತೆ, ರಥಚಕ್ರಗಳ ಧ್ವನಿ, ಕುದುರೆಗಳ ಕುರಪುಟ ಆಲಿಸುತ್ತಾ ಮಗು ಮೈಮರೆಯಿತು. ದೂರದಲ್ಲಿ ವ್ಯಾಸಮುನಿ ಅರಮನೆಯತ್ತಲೇ ನಡೆದು ಬರುವುದು ಕಂಡಿತು. ಮಂದಿ ಪಕ್ಕಕ್ಕೆ ಸರಿದು ವಂದಿಸಿ ದಾರಿ ಬಿಡುತ್ತಿದ್ದರು. ನಾನೂ ನಮಸ್ಕರಿಸಲು ಸಮೀಪಿಸಿದೆ. ಮುನಿ ಮಗುವಿನತ್ತ ನೋಡಿದರು.

'ಪಾಪ, ದೃಷ್ಟಿಹೀನ ಮಗು. ನಿನ್ನದೇ?'

'ಇಲ್ಲ ಸ್ವಾಮಿ, ನನ್ನೊಡತಿ ಮಹಾರಾಣಿ ಅಂಬಿಕೆಯದು'. ಕೇಳಿದೊಡನೆ ಪಿತೃವಾತ್ಸಲ್ಯ ಹೊಮ್ಮಿರಬೇಕು. ಮಗುವನ್ನೆತ್ತಿ ಮುದ್ದಿಸಿದರು. ಜೀವವಿಲ್ಲದ ಕಣ್ಣುಗಳನ್ನು ನವಿರಾಗಿ ನೀವಿದರು. ನಾನು ಬಗ್ಗಿ ಪಾದರೇಣು ತಲೆಗೇರಿಸಿಕೊಂಡೆ' ಪುತ್ರವತಿಯಾಗು ಹರಸಿಬಿಟ್ಟರು!

ಅಯ್ಯೋ ದೇವರೆ, ನಾನಿನ್ನೂ ಅವಿವಾಹಿತೆ. ಆಗಲೇ ಪುತ್ರವತಿಯಾಗು ಎಂದು ಬಿಟ್ಟರಲ್ಲಾ...ಹೇಳಲು ಹೊರಟೆ. ಅವರಾಗಲೇ ಅರಮನೆ ಪ್ರವೇಶ ಮಾಡಿಯಾಗಿತ್ತು. ಈ ಮುನಿಯ ವಾಕ್ಕು ಹುಸಿಯಾದದ್ದೇ ಇಲ್ಲವೆಂದು ಕೇಳಿದ್ದೆ. ಈ ಜೀವ ಇನ್ನೇನೇನು ಅನುಭವಿಸಬೇಕೋ ಎಂದು ಚಿಂತಿಸುತ್ತಲೇ ಅಂತಃಪುರಕ್ಕೆ ಹಿಂದಿರುಗಿದೆ.

* * *

ಅಂಬಿಕೆ ಅದ್ಯಾಕೋ ಕ್ರೋಧಾವಿಷ್ಟಳಾಗಿದ್ದಳು. ಬೆಂಕಿಯುಂಡೆಯಂತೆ ಉರಿಯುತ್ತಿದ್ದ ಕಣ್ಣಳು, ಕೆದರಿದ ತಲೆಕೂದಲು, ಉದ್ವೇಗದ ಉಸಿರಾಟ ಕಂಡು ಮಾತನಾಡಲು ಹಿಂಜರಿದೆ. ತಾಯಿಯ ಧ್ವನಿ ಕೇಳಿದೊಡನೆ ಅಪ್ಪಲು ಹೋದ ಮಗುವನ್ನು ದೂರ ತಳ್ಳಿದಳು.

'ನನ್ನನ್ನು ಇವರೇನೆಂದು ಕೊಂಡಿದ್ದಾರೆ? ನಾನೇನೂ ಇವರ ಜೀತದಾಳಲ್ಲ. ಪ್ರತಿಷ್ಠಿತ ಮನೆತನದ ರಾಜಕುಮಾರಿ. ಮೊದಲ ಸಂತಾನ ಅಂಧನಂತೆ. ಅದಕ್ಕಾಗಿ ಅದೇ ವ್ಯಾಸಮುನಿಯಿಂದ ನಿಯೋಗವಂತೆ! ಮತ್ತೊಂದು ಮಗುವಂತೆ! ಜನಿಸುವ ಶಿಶು ಮಾತು ಬಾರದ ಮೂಕನಾದರೆ ಮಗದೊಮ್ಮೆ ನಿಯೋಗ ಮಾಡಿತ್ತಾರೇನು?'

'ಯಾರು ಹಾಗಂದಿದ್ದು ತಾಯೀ?' ಬೆದರುತ್ತಲೇ ಕೇಳಿದೆ.

'ಮತ್ತಿನ್ಯಾರು? ನನ್ನತ್ತೆ ರಾಜಮಾತೆ'

'ಒಡತಿ, ರಾಜಮಾತೆಯ ಆಜ್ಞೆ, ಎಂದರೆ ಅದನ್ನು ಮೀರುವುದುಂಟೇ?'

'ಮೀರುವೆನೆಂದು ನಾನೆಲ್ಲಿ ಹೇಳಿದೆ? ನಾನು ಆ ಶಯನಗೃಹಕ್ಕೆ ಹೋಗುವುದಿಲ್ಲವೆಂದೆ'

'ನೀವಲ್ಲದೆ ಮತ್ಯಾರು ಹೋಗಲು ಸಾಧ್ಯ ಒಡತಿ?'

'ನೀನು. ನನ್ನ ದಾಸಿ. ನೀ ನನ್ನ ಸ್ಥಾನದಲ್ಲಿ ಹೋಗಿ ಮುನಿಯಿಂದ ಸಂತಾನ ಪಡೆದುಕೋ'

ನಾನು ತತ್ತರಿಸಿ ಹೋದೆ. ಅವಳ ಕಾಲಬಳಿ ಕುಸಿದು ಕುಳಿತೆ. ಬೇಡಿದೆ. ಅತ್ತು ಗೋಳಿಟ್ಟೆ. ಅವಳ ಹೃದಯ ಕರಗಲೇ ಇಲ್ಲ. ನನ್ನನ್ನೇ ನಿಂದಿಸಿದಳು.

'ದಾಸಿ ಇದರಿಂದ ನಿನಗೆಂತಹ ಕಷ್ಟ? ಮಗುವನ್ನು ಹೆತ್ತು ನನ್ನ ಒಡಲಿಗೆ ಹಾಕು. ಅಲ್ಲಿಗೆ ನಿನ್ನ ಕರ್ತವ್ಯ ತೀರಿತು. ಮುಂದೆ ನಿಶ್ಚಿಂತೆಯಂತೆ ನೀನೊಲಿದವನೊಡನೆ ನಾನೇ ಮುಂದೆ ನಿಂತು ವಿವಾಹ ಮಾಡುವೆ' ಎಂದಳು.

ಕುಂತಿ, ದಾಸಿಯರಿಗೆ ಹಕ್ಕುಗಳೆಲ್ಲಿದ್ದುವು? ಆಳುವವರ ಚದುರಂದಾಟದಲ್ಲಿ ನಾವು ಕೇವಲ ದಾಳಗಳಷ್ಟೇ ಅಲ್ಲವೇ? ನಾನು ಬೇಡುತ್ತಾ ನನ್ನ ಪ್ರಯತ್ನ ಮುಂದುವರೆಸಿದೆ.

'ಒಡತಿ, ಈ ವಿಚಾರ ರಾಜಮಾತೆಗೋ ಪಿತಾಮಹರಿಗೋ ತಿಳಿದರೆ? ನನ್ನದಿರಲಿ. ನಿಮ್ಮ ಗತಿ?' ಈ ಸಾಧ್ಯತೆಯ ಭಯದಿಂದಲಾದರೂ ನಾನು ತಪ್ಪಿಸಬಹುದೆಂಬ ಆಸೆಯಲ್ಲಿ ಕೇಳಿದೆ.

'ತಿಳಿಯಲು ಸಾಧ್ಯವೇ ಇಲ್ಲ. ನಿಯೋಗ ವಿಧಿಯ ನಿಯಮದ ಪ್ರಕಾರ ಶಯನ ಗೃಹದಲ್ಲಿ ಸಂಪೂರ್ಣ ಅಂಧಕಾರವಿರಬೇಕು. ಪರಸ್ಪರ ಮಾತನಾಡುವುದು ನಿಷಿದ್ಧ. ಇಂತಹ ಪರಿಸ್ಥಿತಿಯಲ್ಲಿ ಮುನಿಗೆ ಬದಲಾವಣೆ ಅರಿಯಲು ಸಾಧ್ಯವೇ ಇಲ್ಲ' ಎಂದು ನನ್ನ ಸಂದೇಹವನ್ನು ತಳ್ಳಿಹಾಕಿದಳು.

'ಕುಂತಿ, ಒಂದು ಮಾಸದ ಪರ್ಯಂತ ನಿಯೋಗ ವಿಧಿ ನಡೆಯಿತು. ಮೊದ ಮೊದಲು ಮುನಿಯ ಬಗ್ಗೆ ನನಗಿದ್ದ ಭಯ, ತಿರಸ್ಕಾರ ಕ್ರಮೇಣ ಮಾಯವಾಗತೊಡಗಿತು. ಅವರು ನನ್ನಲ್ಲಿ ನಡೆದುಕೊಳ್ಳುತ್ತಿದ್ದ ರೀತಿ ಹೆಣ್ಣನ್ನೆಷ್ಟು ಗೌರವಿಸುವವರು ಎಂಬುದು ಸ್ಪಷ್ಟವಾಗುತ್ತಿತ್ತು. ಅವರ ವ್ಯಕ್ತಿತ್ವಕ್ಕೆ ಮಾರುಹೋಗಿ ಕ್ರಮೇಣ ಮೋಹಿಸತೊಡಗಿದೆ. ಅನುರಾಗದಿಂದ ನನ್ನನ್ನು ಅವರಿಗೆ ಸಂಪೂರ್ಣ ಅರ್ಪಿಸಿಕೊಂಡು ಬಿಟ್ಟಿದ್ದೆ.

ಅಂದು ಕೊನೆಯ ರಾತ್ರಿ. ರಾತ್ರಿ ಕಳೆದು